# ಇಂದಿನ ಮಹಿಳಾ ಕಾವ್ಯಗಳಲ್ಲಿ ಹೊಸತನದ ತುಡಿತಗಳು

**ಸುಮಾ ವ. ಸಾವಂತ**

ಕನ್ನಡ ಉಪನ್ಯಾಸಕರು, ಸ. ಪ್ರ. ದ. ಕಾಲೇಜು, ಅಳ್ನಾವರ.

**DOI: https://doi.org/10.5281/zenodo.18700401**

## ABSTRACT:

ಇಂದಿನ ಮಹಿಳಾ ಕಾವ್ಯವು ಕೇವಲ ಭಾವನಾತ್ಮಕ ಅಭಿವ್ಯಕ್ತಿಯಾಗದೆ, ಹೆಣ್ಣಿನ ಅಸ್ತಿತ್ವ ಮತ್ತು ಸ್ವಂತಿಕೆಯ ಹುಡುಕಾಟದ ದನಿಯಾಗಿ ಮಾರ್ಪಟ್ಟಿದೆ. ಪುರುಷ ಪ್ರಧಾನ ಸಮಾಜದಲ್ಲಿನ ಶೋಷಣೆ, ಭೋಗದ ವಸ್ತುವಾಗಿ ಸ್ತ್ರೀಯನ್ನು ನೋಡುವ ದೃಷ್ಟಿಕೋನ ಮತ್ತು ಪಿತೃಪ್ರಧಾನ ಮೌಲ್ಯಗಳ ವಿರುದ್ಧ ಆಧುನಿಕ ಕವಯಿತ್ರಿಯರು ಹರಿತವಾದ ಪ್ರತಿಭಟನೆಯನ್ನು ದಾಖಲಿಸುತ್ತಿದ್ದಾರೆ. ಭ್ರೂಣಹತ್ಯೆ, ಕೌಟುಂಬಿಕ ದೌರ್ಜನ್ಯ ಮತ್ತು ಲಿಂಗ ತಾರತಮ್ಯದಂತಹ ಜ್ವಲಂತ ಸಮಸ್ಯೆಗಳನ್ನು ಈ ಲೇಖನವು ಸಮಕಾಲೀನ ಕವಿತೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಸ್ತ್ರೀವಾದಿ ಚಿಂತನೆಗಳು ಇಲ್ಲಿ ಪುರುಷ ವಿರೋಧಿಯಾಗಿರದೆ, ಸಮಾನತೆ ಮತ್ತು ಸಹಗಮನದ ಆಶಯವನ್ನು ಹೊಂದಿವೆ. ಶಿಕ್ಷಣ ಮತ್ತು ಜಾಗತೀಕರಣದ ಪ್ರಭಾವದಿಂದಾಗಿ ಮಹಿಳೆಯು ತನ್ನ ಮೌನವನ್ನು ಮುರಿದು, ಅಕ್ಷರಗಳ ಮೂಲಕ ಅಂಧಕಾರದಿಂದ ಬೆಳಕಿನೆಡೆಗೆ ಸಾಗುವ ಹಾಗೂ ತನ್ನದೇ ಆದ ಹೊಸ ಪರಂಪರೆಯನ್ನು ಸೃಷ್ಟಿಸುವ ತುಡಿತಗಳನ್ನು ಈ ಪ್ರಸ್ತುತ ಲೇಖನವು ಚರ್ಚಿಸುತ್ತದೆ.

## KEYWORDS:

ಮಹಿಳಾ ಕಾವ್ಯ, ಅಸ್ತಿತ್ವದ ಹುಡುಕಾಟ, ಸ್ತ್ರೀ ಸಂವೇದನೆ, ಸಾಮಾಜಿಕ ಶೋಷಣೆ, ಹೊಸತನದ ತುಡಿತ.

ಇತ್ತೀಚಿನ ಮಹಿಳಾ ಸಾಹಿತ್ಯವನ್ನು ಗಮನಿಸಿದಾಗ ಅದರ ಬೆಳವಣಿಗೆಯ ಗತಿಯನ್ನು ಅವಲೋಕಿಸಿದರೆ ಸ್ತ್ರೀ ತನ್ನ ಅಸ್ತಿತ್ವದ ಹುಡುಕಾಟದಲ್ಲಿದ್ದಾಳೆ. ಹೊಸತನಕ್ಕೆ ಒಗ್ಗಿಕೊಳ್ಳುವ ಜಗಿತವಿದೆ. ಜೊತೆಗೆ ಸ್ವಂತ ಪರಂಪರೆಯನ್ನು ಸೃಷ್ಟಿಸುವ, ಅದನ್ನು ಸಾಧಿಸುವ ಹೊಸ ಭಾಷ್ಯವನ್ನು ಬರೆಯುವ ಹುಮ್ಮಸ್ಸಿದೆ. ಅವಳ ಮೌನ, ಸಿಟ್ಟು, ಸ್ವಾಭಿಮಾನ, ಆಕ್ರೋಶ, ಪ್ರೀತಿ, ಗೆಲ್ಲುವ ಉತ್ಸಾಹ, ವರ್ತಮಾನದ ಭವಿಷ್ಯದ ಚಿಂತನೆಗಳು ಹೀಗೆ ಹಲವಾರು ಮಿಡಿತಗಳಿಗೆ ಅಕ್ಷರರೂಪ ನೀಡಿ ತಮ್ಮತನ ಸ್ವಂತಿಕೆಯಿಂದ ಮೆರೆಯುತ್ತಾರೆ.

ಪುರುಷ ಪ್ರಧಾನತೆ ಹೊಂದಿದ ಈ ಸಮಾಜದಲ್ಲಿ ಮಹಿಳೆ ಒಂದು ಸರಕಾಗಿ, ಭೋಗದ ವಸ್ತುವಾಗಿ, ಸೇವೆಯ ಪ್ರತಿರೂಪವಾಗಿ, ಶೋಷಣೆಯ ಶಿಶುವಾಗಿ, ಪೋಷಣೆಯ ಪಶುವಾಗಿ, ಹೇರುವ ಯಂತ್ರಗಳಾಗಿ ನಾನಾ ವಿಧದಲ್ಲಿ ಶೋಷಣೆಗೆ ಒಳಗಾಗುತ್ತಾರೆ. ಇತ್ತೀಚಿನ ಕನ್ನಡ ಕಾವ್ಯಗಳಲ್ಲಿ ಮಹಿಳೆಗೆ ಸಂಬಂಧಿಸಿದ ಸಾಮಾಜಿಕ ಮೌಲ್ಯಗಳು, ಸ್ತ್ರೀ ಶೋಷಣೆಗೆ ಕಾರಣವಾದ ಸಂಗತಿಗಳು, ವರ್ತಮಾನದ ಜ್ವಲಂತ ಸಮಸ್ಯೆಗಳು ಮೂಡಿಬಂದಿವೆ. ಸ್ತ್ರೀ ಬರಹದ ಧ್ವನಿ ಸಮಾನತೆಯ ಆಶಾ ಭಾವನೆ ಮತ್ತು ಸಮಸ್ಯೆಗಳ ವಿರುದ್ಧ ಪ್ರತಿಭಟಿಸುವ ಕ್ರಮ ಹರಿತ ಖಡ್ಗಗಳಂತೆ ಅಭಿವ್ಯಕ್ತಗೊಂಡಿದೆ. ವರ್ತಮಾನದ ಕನ್ನಡ ಕಾವ್ಯಗಳಲ್ಲಿ ಸ್ತ್ರೀ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುವ ಹಂಬಲದಲ್ಲಿದ್ದಾಳೆ.

ಇಂದಿನ ಜಾಗತೀಕರಣ ಸಂದರ್ಭದಲ್ಲಿ ಉಂಟಾಗುವ ಪರಿಣಾಮಗಳ ಜೊತೆ ಹೋರಾಡಬೇಕಾಗುತ್ತದೆ. ಇವುಗಳನ್ನು ತಮ್ಮ ಕಾವ್ಯಗಳ ಮೂಲಕ ಬಿತ್ತರಿಸುತ್ತಿದ್ದಾರೆ. ಇದಲ್ಲದೆ

ಸಾಮಾಜಿಕ ಕಾಳಜಿ ಪರಿವರ್ತನೆಗೆ ತಮ್ಮನ್ನು ತಾವು ಅಳವಡಿಸಿಕೊಂಡು ಆ ನೆಲೆಯಲ್ಲಿ ವಿವಿಧ ಮುಖಗಳ ಅನಾವರಣ ಸೃಜನಾತ್ಮಕವಾಗಿ ಸಂವೇದನೆ ಪ್ರಸ್ತುತಪಡಿಸುತ್ತಿದ್ದಾರೆ. ಸ್ತ್ರೀವಾದಿ ಚಿಂತನೆಗಳಿಗೆ ಹೊಸ ಆಯಾಮಗಳನ್ನು ಸೃಷ್ಟಿಸಿದ್ದಾರೆ.

**"ಕತ್ತಲಲ್ಲಿ ಕೊಳೆಯುತ್ತಿದ್ದೇವೆ**
**ನಾನು ನನ್ನ ಅಕ್ಷರಗಳು**
**ಮೊಂಬತ್ತಿ ಇದೆಯೋ ಇಲ್ಲವೋ**
**ಎಲ್ಲಿಟ್ಟೇನೋ ಹುಡುಕಲಾಗುತ್ತಿಲ್ಲ"**

ಇಲ್ಲಿ ಕೆ. ವಿ. ಚಂದ್ರಜ್ಯೋತಿ ಅವರ 'ಬಂದೇ ಬರ್ತಾರೆ!' ಕವನದಲ್ಲಿ ಮಹಿಳೆಯರ ಅಂಧಕಾರದಲ್ಲಿ ಮುಳುಗಿದ ವಾಸ್ತವ ಹೇಳುವುದಲ್ಲದೆ ಸಾಕ್ಷರತೆ ಹಕ್ಕನ್ನು ಹುಡುಕುವುದನ್ನು ಪಡೆದುಕೊಳ್ಳುವ ಹಂಬಲವಿದೆ. ಅದಕ್ಕೆ ಅವಳು ಹೊರಗಿನಿಂದ ಬೆಳಕು ತನ್ನಿ ಎಂದು ಯಾರನ್ನು ಗೋಗರೆದು ಕರೆಯಲಿ? ತನ್ನ ಅಳಲನ್ನು ತೋಡಿಕೊಂಡಿದ್ದಾಳೆ. 'ಕತ್ತಲೆಯಲ್ಲಿರುವವಳು ಹೆಣ್ಣಾದರೆ ಬರುತ್ತಾರೆ ಹಿಂಡಲು ಹೀರಲು ಅಕ್ಷರಗಳಲ್ಲೆಲ್ಲಿದೆ ರಕ್ತ ಮಾಂಸ' ಇದನ್ನು ಬಹಳ ಧಾರ್ಮಿಕವಾಗಿ ಪುರುಷರ ಸ್ವಾರ್ಥಪರತೆ ಹಾಗೂ ದೌರ್ಜನ್ಯತೆಯನ್ನು ಚಿತ್ರಿಸಿದ್ದಾರೆ. ಅದಕ್ಕೆ ಅವಳು ನಿರೀಕ್ಷಿಸುವಳು ತನ್ನ ಹಾಗೂ ತನ್ನ ಉದ್ಧಾರಕ್ಕಿರುವುದು ಕೇವಲ ಅಕ್ಷರಗಳೆಂಬುದು ಎಂಬ ಅರಿವಿದೆ. ಇಂದಿನ ಮಹಿಳಾ ಲೋಕ ಅರಿಯುವ ಸಂಗತಿ ಪ್ರತಿಪಾದಿಸುವುದಲ್ಲದೆ ಗಂಡು ಸಮಾಜಕ್ಕೆ ಕೊನೆಯ ವಿನಂತಿಪೂರ್ವಕವಾಗಿ ಹೇಳುವರು.

ಭವ್ಯ. ಪಿ ಅವರು ತಮ್ಮ ಕವಿತೆ 'ಕೂರುತ್ತೇನೆ' ಇದರಲ್ಲಿ ಹೆಣ್ಣು ಅಬಲೆ ಅಲ್ಲ ಸಬಲೇ ಎಂಬುದನ್ನು ಸಾಧಿಸಲು ಹವಣಿಸುವ ತವಕ ಕಾಣುತ್ತದೆ. ಸಮಾಜ ಕುಟುಂಬ ಹಾಕಿದ ನಿರ್ಬಂಧಗಳನ್ನು ಮೆಟ್ಟಿ ಬಾ ಎನ್ನುವ ಉತ್ಸಾಹವಿದೆ.

**"ಮೌನ ಸಹನೆ ನಿಬಂಧನೆಗಳ ಸಾವಿರ ಕೋಟೆಗಳಿಂದ**
**ಬಿರುಸಿ ಬಾಣ ಫರ್ನಲುಗಳಂತೆ**
**ಎಲ್ಲಾ ಆಸೆಗಳು ಏರಿ ಏರಿ"**

ಕವಿತೆ ಸಾಧಿಸುವ ಮಹಿಳೆ ಸಹಿಸಿಕೊಳ್ಳುವ, ಎದುರಿಸುವ ಸಂಗತಿಗಳಿಗೆ ತಾಳ್ಮೆಯಿಂದ ಕೂರುತ್ತೇನೆ ಅನ್ನುತ್ತಾಳೆ.

**"ಇನ್ನು ಎಷ್ಟು ದಿನ ಉರುಳಬೇಕು?**
**ಉರುಳಿ ಏನೂ ಆಗಿಲ್ಲವೆಂಬಂತೆ**
**ಕೂರುತ್ತೇನೆ ಕಾಯುತ್ತೇನೆ**
**ನನಗೆ ನನ್ನದೇ ಕಥೆಗಳ ಹೇಳಬೇಕಿದೆ"**

ಮಹಿಳೆ ತನ್ನ ಅಸ್ತಿತ್ವ ಗುರುತಿಸಿಕೊಳ್ಳಲು ಬಾಲ್ಯದಿಂದಲೇ ಪುಟಿದೇಳಬೇಕು ಎಂಬ ಆಶಯ ವ್ಯಕ್ತಪಡಿಸಿದ್ದಾರೆ.

ಡಾ. ಎಚ್. ಎಸ್. ಅನುಪಮಾ ಅವರ 'ಸಹಗಮನ' ಮುಖ್ಯವಾಗಿ ಸ್ತ್ರೀ ಸಂವೇದನೆಯನ್ನೇ ಕವಿತೆಯಾಗಿಸಿದೆ. ಹೆಣ್ಣು ಮದುವೆಯಾಗಿಯೂ ತನ್ನತನ ಉಳಿಸಿಕೊಳ್ಳಲು ಪಡುವ ಪಾಡು ಇಲ್ಲಿನ ಕವಿತೆಗಳಾಗಿವೆ. ಹೌದು ಮದುವೆಯಂಥಹ ಬಂಧ ಹೆಣ್ಣು ಗಂಡನ ಅನುಯಾಯಿ, ನೆರಳಾಗಬೇಕು, ಅವನೊಡನೆ ಹೆಜ್ಜೆಗೆ ಹೆಜ್ಜೆ ತುಳಿಯಬೇಕು ಎಂದು ನಂಬಿದ ಸಮಾಜದಲ್ಲಿರುವ ನಮಗೆ ಇಂದು ಹೆಣ್ಣು ತನ್ನತನ ಉಳಿಸಿಕೊಂಡು ಬದುಕುವುದಕ್ಕೆ ಕಷ್ಟ ಪಡಬೇಕಾಗುತ್ತದೆ ಎನ್ನುವದು ಸತ್ಯವಾಗಿದೆ. ಹಾಗೆಂದು ಇವು ಪುರುಷ ವಿರೋಧಿ ನೆಲೆಯ

ಪದ್ಯಗಳಲ್ಲ. ಸಹಗಮನದ ಹೆಜ್ಜೆಯ ದನಿಗಳು. ತಮ್ಮ ಮಾತಿನಲ್ಲಿ ಕವಯತ್ರಿ "ಸಹಗಮನ ಸಂಗಾತಿಯೊಡನಷ್ಟೇ ಅಲ್ಲ, ಬದುಕಿನೊಡನೆ, ಕಾಲದೊಡನೆ, ಹಾಗೂ ಕಾವ್ಯದೊಡನೆಯೂ ಹೌದು. ಹೆಣ್ತನವನ್ನು, ಹೆಣ್ತನಕ್ಕೆ, ಕಾರಣವಾದ ಎಲ್ಲವನ್ನು ಅವನೊಡನೆ ಅನುಭವಿಸಿದ್ದೇನೆ.... ಇದೆಲ್ಲದರಿಂದ ಅವನೂ ಬಿಸಿ ಅನುಭವಿಸುತ್ತ, ಮಾಗುತ್ತ ನನ್ನ ಕಲ್ಪನೆಯಲ್ಲೂ ನಿಜ ಜೀವನದಲ್ಲೂ ಪಕ್ವವಾಗಿದ್ದಾನೆ."

ಈ ಸಾಲುಗಳು ಹೆಣ್ಣು ಎದುರಿಸಬೇಕಾದ ಅನುಭವದ ಸಾಲುಗಳ ವಿಸ್ತಾರವನ್ನು ಸೂಚಿಸುತ್ತವೆ. ಸಹಗಮನ ಎಂಬ ಪದಕ್ಕೆ ವಿಶೇಷ ಅರ್ಥವಿದೆ. ಗಂಡ ಸತ್ತ ನಂತರ ಅವನ ಚಿಂತೆಯ ಬೆಂಕಿಯಲ್ಲಿ ಹೆಣ್ಣು ಅನಿವಾರ್ಯವಾಗಿ ತಾನೂ ಇಳಿಯಬೇಕಾದ ಸಂದರ್ಭವನ್ನು ಸೂಚಿಸುವ ಪದ ಅದು. ಅಂದರೆ ಹೆಣ್ಣು ಹೆಜ್ಜೆ ಹೆಜ್ಜೆಗೂ ಇಲ್ಲಿ ಕಾವ್ಯ ಕೇವಲ ಪ್ರತಿಭಟನೆಯ ಹಂತದಲ್ಲಿ ನಿಲ್ಲದೇ ಅನುಸಂಧಾನದ ದಾರಿಯನ್ನೂ ತುಳಿದದ್ದು ಕಾಣಿಸುತ್ತದೆ. ಅವರದೇ ಮಾತನ್ನು ಉದ್ಧರಿಸುವದಾದರೆ "ಈ ಸಂಕಲನದಲ್ಲಿ ಆರಂಭದಲ್ಲಿ ಅರ್ಪಣಾ ಲಹರಿಯ ಪ್ರೇಮ ಕವನಗಳ ಸಂಖ್ಯೆ ಹೆಚ್ಚಿದ್ದರೂ ತಾಯ್ತನದ ಅನುಭವ ಹೇಳುವ, ಸದ್ದಿಲ್ಲದೆ ಜಗಳಕ್ಕೆ ಬರುವ ಕವನಗಳೂ ಇವೆ."

"ಆದರೆ ಈ ಅನುಸಂಧಾನ ಕಣ್ಣು ಮುಚ್ಚಿದ ಅನುಸರಣೆ ಅಲ್ಲ. ಅವರೇ ಹೇಳುವಂತೆ ಅವರದು ತಾನ ತಂದಾನ ಆಗಲೊಲ್ಲದ ಬದುಕು" ಸಂಗಾತಿಯೊಂದಿಗಿನ ನನ್ನ ಬದುಕು ಅರುಂಧತಿಯಾಗುವದರಲ್ಲಿ, ತಾನ ತಂದಾನ ಅನ್ನುವದರಲ್ಲಿ ಕಳೆದುಹೋಗದಂತೆ ಯಾವುದೋ ತಡೆಯಿತು." ಎಂಬ ಸಾಲುಗಳನ್ನು ಗಮನಿಸಬೇಕು. ಅವರ ಕಾವ್ಯದ ದಾರಿ ಸ್ಪಷ್ಟವಾಗುತ್ತದೆ.

ದಾಂಪತ್ಯವೆಂದರೆ ಜೊತೆಗೆ ಮಾಗುವ ದಿವ್ಯ ಎಂದಿದ್ದರು ನವೋದಯ ಕವಿಗಳು. ತೀರಾ ಅಷ್ಟು ಅನುಸರಣೆಯ ವ್ಯಾಪ್ತಿ ಇಲ್ಲಿಲ್ಲವಾದರೂ ದಾಂಪತ್ಯ ಇಬ್ಬರೊಂದಾಗಿ ಕುದಿವ ಪಾತ್ರೆಯಲ್ಲಿ ಸುಡುವದು ಎಂದು ಅವರಿಗೆ ಗೊತ್ತಿದೆ. 'ಲುದಿ' ಎಂಬ ಪದ್ಯ ಹೇಳುವಂತೆ:

**"ನಾ ಪಾತ್ರೆ**
**ಅವ ಒಲೆ**
**ತಬ್ಬಿ ದಂಡೆ ಕಾಯಬೇಕಾದರೆ**
**ತನ್ನ ಸುಟ್ಟುಕೊಂಡು ಉರುವಲು**
**ತಾ ಬೆಂಕಿಯಾಗಬೇಕು"**

ಸಹಗಮನ ಕೇವಲ ಹೆಣ್ಣಿನದೂ ಅಲ್ಲ ಗಂಡಿನದೂ ಕೂಡ ಆಗಿರುತ್ತದೆ. ಇಲ್ಲಿ ದಾಂಪತ್ಯದ ಚಂದದ ಚಿತ್ರಗಳು ಆರಂಭದಲ್ಲಿ ಇವೆಯೆಂದು ಕವಯಿತ್ರಿಯೇ ಹೇಳಿದ್ದಾರೆ. 'ಭೂಮಿಗೀತ' ಎಂಬ ಕವಿತೆ ಅವರಿಬ್ಬರ ಸಾಂಗತ್ಯದ ಚಿತ್ರವನ್ನು:

**"ನನ್ನ ಚೆಲುವ**
**ಸೂರ್ಯನ ಮಗ**
**ಕೆಂಪಾಗಿಯೇ ದಿನ ಶುರುವಾಗುತ್ತದೆ**
**ತಂಗಾಳಿಯಾಗಿ**
**ಮಂಜುಹನಿಯಾಗಿ**
**ಸೋನೆ ಮಳೆಯಾಗಿ**
**ಶಾಂತಗೊಳಿಸುತ್ತೇನೆ"**

ಗಂಡಿನ ಕೋಪ ಹೆಣ್ಣಿನ ತಾಳ್ಮೆಯ ಸಾಂಗತ್ಯ ಇಲ್ಲೂ ಇದೆ. ಅವನ ಸಿಟ್ಟು ಬಹಳ ಹೊತ್ತಿನದೇನಲ್ಲ "ಹೇಳದೇ ಮರೆಯಾದವ ಉನ್ಮತ್ತನಾಗಿ ಹಿಂದಿರುಗುತ್ತಾನೆ. ತಂಬೆಳದಿಂಗಳ

ಹರಿಸಿ ಮೂಲೆ ಮೂಲೆ ಮುಟ್ಟುತ್ತಾನೆ..'' ಇತ್ಯಾದಿ ಸಾಲುಗಳಲ್ಲಿರುವದು ಸಾಂಗತ್ಯದ ಸಾರ್ಥಕ್ಯವೇ ಹೊರತು ಇನ್ನೇನಲ್ಲ. ಆ ಸಾರ್ಥಕ್ಯದ ಚಿತ್ರಣ:

**''ನಾವೂ ಹೀಗೆ..**
**ದಿನರಾತ್ರಿಗಳಲ್ಲಿ**
**ಉಕ್ಕುತ್ತ ಬರಿದಾಗುತ್ತ**
**ಬಿಸಿಯೇರುತ್ತ ತಂಪಾಗುತ್ತ**
**ಕೊನರುತ್ತ ಕಮರುತ್ತ**
**ದಿನ ಋತು-ವರ್ಷಗಳ**
**ಬದುಕೆಂಬ ಹೊಸ ಕಾವ್ಯ**
**ನಿತ್ಯ ಕಟ್ಟುತ್ತಲೇ ಇದ್ದೇವೆ.''**

ಇದು ಮುಗಿಯುವ ಭೂಮಿಗೀತವೂ ಅಲ್ಲ, ಸಾರ್ಥಕ್ಯದ ಸ್ತೋತ್ರವಿದು. ಇದು ಕೇವಲ ಸರಳ ರೇಖೆಯಂತ ಪ್ರೇಮಾಲಾಪವನ್ನು ಅಲ್ಲಿರುವ ಕಲ್ಲುಮುಳ್ಳುಗಳ ತುಳಿದು ದಾಟುವ ದಿವ್ಯವೇ. ಅದನ್ನು 'ಕೊಡಲಾರದೆ ಬಚ್ಚಿಟ್ಟುಕೊಳ್ಳಲಾರೆ ಕವಿತೆ' ಇನ್ನೂ ಸ್ಪಷ್ಟ ಮಾಡುತ್ತದೆ.

**''ಪ್ರೇಮ ಸರಳರೇಖೆಯಲ್ಲ**
**ಕೊನೆಯಿರದ ವರ್ತುಲ ಗೆಳೆಯಾ''**

ಒಮ್ಮೊಮ್ಮೆ ಅವಳು ಮಾತನಾಡದ ಅವನ ಮಾತಿಗಾಗಿ ಕಾಯುತ್ತಾಳೆ. ಅವನದೋ ಮೌನ ಭಾಷೆ. ಆಗೆಲ್ಲ ಅವನ ಮಾತು ತನಗೆ ತಿಳಿಯುತ್ತದೆ ಎನ್ನುವ ಅವಳು, ಆದರೆ ಬರಿ ಮಾತು ಭಾವ ತಿಳಿಸದು ಎನ್ನುವ ಅರಿವಿರುವವಳಾದ್ದರಿಂದ 'ಮೂಕಪ್ರೇಮ' ಕವಿತೆಯಲ್ಲಿ:

**''ಭಾವನದಿಗಳು ಸೇರಿ**
**ಪರಮಾನಂದವೆಂಬ ಕಡಲು**
**ಮಾತಿನ ಕಲ್ಲೆಸೆದು''**

ಆಳ ಅಳೆಯಲಾಗದು ಎಂಬ ಅರಿವಿರುವವಳಾದ್ದರಿಂದ ಮಾತು ಅಲ್ಲಿ ನಿಸ್ಸಾರವೆನಿಸುತ್ತದೆ ಆಕೆಗೆ. ಕಾರಣ 'ಫಕ್ಕನೊಮ್ಮೆ ನಕ್ಕು ಬಿಡು ಅದುವೆ ಸಾವಿರ ಮಾತು' ಎಂದು ಕೇಳಿಕೊಳ್ಳುತ್ತಾಳೆ. ಹೆಣ್ಣು ತನ್ನ ಸ್ವಂತಿಕೆಯ ಬದುಕನ್ನು ತಾನೇ ಸಾಗಿದವಳು ಎಂಬುದನ್ನು 'ಪತನಗೊಳ್ಳದು' ಕವಿತೆ ಸಾರುತ್ತದೆ. ಪ್ರೇಮದ ಆದರ್ಶವನ್ನೂ ವೈಚಿತ್ರ್ಯವನ್ನೂ ಸಾರುವ ಈ ಕವಿತೆ ತನ್ನ ಸಂಗಾತಿಗೆ ಹೇಳುವ ವಿನಂತಿಯಂತಿದೆ. ಪ್ರೇಮದ ವೈಚಿತ್ರ್ಯವೇ ಅದು ಬರುವ ಸೂಚನೆಯೂ ಸಿಗದೇ ಫಕ್ಕನೆ ಒಳನುಸುಳಿ ಬಿಡುತ್ತದೆ.

**''ಎಲ್ಲ ಕದ ಮುಚ್ಚಿ**
**ಕೋಣೆ ಒಳಹೊಕ್ಕು ಕುಳಿತಿದ್ದೆ**
**ಅದುಹೇಗೆ ಒಳ ನುಸುಳಿ**
**ಬೆಳಕಾಗಿ ಬಂದೆ**
**ನನ್ನೆದೆಯೊಳಗೆ''**

ನಿಜ ಯಾರಿಗೂ ಈ ಪ್ರೇಮ ಹುಟ್ಟುವ ದಾರಿ ತಿಳಿಯದು ಆದರೆ ಅದು ಹುಟ್ಟಿದ ಮೇಲೆ ಎರಡೂ ಎದೆಗಳನ್ನು ಕಾಪಾಡುತ್ತದೆ. ಎಂತಹ ದಿವ್ಯತೆ ಅದು ಎನ್ನುವದನ್ನು ಕವಿತೆಯ ಕೊನೆಯ ಸಾಲು ''ಈ ಜಗದ ಸುಳ್ಳುಗಳಿಂದ ಅದು ನಮ್ಮನ್ನು ಕಾಪಾಡಲಿ'' ಎನ್ನುವಲ್ಲಿ ಸೂಚಿತವಾಗುತ್ತದೆ.

ದೇಶ, ಧರ್ಮ, ಜಾತಿ ವರ್ಗಗಳ ನಡುವಿನ ತಾರತಮ್ಯಗಳು ಒಟ್ಟಾರೆ ಸಮಾಜವನ್ನು

ಪ್ರಭಾವಿಸಿದರೆ ಈ ಪ್ರತಿಯೊಂದು ವಲಯದೊಳಗೂ ಹೆಣ್ಣಿನ ಸ್ಥಾನಮಾನಗಳು ಮಾತ್ರ ಎರಡನೇ ದರ್ಜೆಯವೇ. ಸಿಮೋನ ದ ಬೊವಾ ಹೇಳುವಂತೆ ಹೆಣ್ಣನ್ನು ರೂಪಿಸಲಾಗುತ್ತದೆ. ಪ್ರಾಕೃತಿಕ ಸೃಷ್ಟಿಯ ಭಿನ್ನತೆಯ ಕಾರಣದಿಂದ ಜೀವಶಾಸ್ತ್ರೀಯವಾಗಿ ಹೆಣ್ಣು ಗಂಡಿಗಿಂತ ಭಿನ್ನವಾದ ದೇಹ ಲಕ್ಷಣಗಳನ್ನು ಪಡೆಯುತ್ತಾಳೆ. ಈ ಮೂಲಭೂತವಾದ ಭಿನ್ನತೆ ಎಂದರೆ ಮಾನದಂಡದಿಂದ ಅವಳ ಬದುಕಿನ ಹಲವು ಸ್ತರಗಳಲ್ಲಿ ಅವಳ ವ್ಯಕ್ತಿತ್ವವನ್ನು ಗಮನಿಸುವ ಪ್ರಕ್ರಿಯೆ ನಡೆಯುತ್ತದೆ. ಆಧುನಿಕ ನಾಗರಿಕ ಪ್ರಪಂಚದಲ್ಲಿ ಇದು ಪ್ರಾರಂಭವಾಗುವುದು ಮಗು ಇನ್ನೂ ಹೊಟ್ಟೆಯಲ್ಲಿರುವಾಗಲೇ. ತಾಯಿಯ ಹೊಟ್ಟೆಯಲ್ಲಿ ಅದನ್ನು ಹಿಸುಕಿ ಹಾಕುವ ಕ್ರೌರ್ಯವನ್ನು ಮಗುವಿನ ಬಾಯಿಂದಲೇ ಮನ ಮುಟ್ಟಿಸುತ್ತಾರೆ ಮಾಧವಿ ಭಂಡಾರಿ.

**"ಅಮ್ಮಾ ಅಪ್ಪ ಬೆಳಬೆಳಗ್ಗೆ ಬಡಬಡಿಸಿ**
**ದೇವಸ್ಥಾನದೆಡೆಗೆ ಹೋದರಲ್ಲಮ್ಮ**
**ಜಲ್ದಿ ಅಡಿಗೆ ಮುಗಿಸಿ ಸಿದ್ಧಳಾಗು**
**ಸ್ಕ್ಯಾನಿಂಗ್ ಇದೆ ಎಂದು**
**ಹಾಗೆಂದರೇನಮ್ಮಾ?**
**ಕೈಕಾಲು ಬಲಿಯುವ ಮುನ್ನವೇ**
**ನನ್ನ ಕತ್ತ ಹಿಸುಕುವ**
**ಹುನ್ನಾರವೇನಮ್ಮ"**

ಹೆಣ್ಣಾಗಿಯೂ ತನ್ನ ಹೊಟ್ಟೆಯೊಳಗೆ ಹೆಣ್ಣು ಮಗುವನ್ನು ಉಳಿಸಿಕೊಳ್ಳಲಾಗದ್ದಕ್ಕೆ ತಾಯಿ ಅಸಹಾಯಕತೆಯನ್ನು ಎನ್ನುವುದನ್ನು ಕೂಡ ಕವನ ಮುಂದೆ ವಿವರಿಸುತ್ತದೆ. ಇಂತಹ ಬಲಿಯನ್ನು ಪ್ರತಿಭಟಿಸಿದರೆ ತನ್ನ ಜೀವನಕ್ಕೆ ಕುತ್ತು. ಹೀಗೆ ಲಿಂಗದ ಕಾರಣದಿಂದಾಗಿ ಹೆಣ್ಣು ಮಗು ಹುಟ್ಟುವ ಪೂರ್ವದಲ್ಲಿಯೇ ಕಣ್ಮರೆಯಾಗುವ ಕ್ರೌರ್ಯವನ್ನು ಇನ್ನಷ್ಟು ಧ್ವನಿ ಪೂರ್ಣವಾಗಿಸಿದ್ದಾರೆ ರೂಪಾ ಹಾಸನ ಅವರ ಕವಿತೆಗಳಲ್ಲಿ.

**"ನಿಶಬ್ದದ ಹೊಸ ಭ್ರೂಣದ ಮೊಳಕೆ**
**ಹಳೆಯ ಬೇರಿಗೆ ಕೊಳೆತ ಗೊಬ್ಬರ**
**ಹೊಸತಿನೊಂದಿಗೆ ನೋವಿನ ಟಿಸಿಲು"**

ಭ್ರೂಣ ಹತ್ಯೆಯಂತಹ ಕ್ರೌರ್ಯವನ್ನು ಅದರ ರಾಕ್ಷಸಿ ಮುಖಗಳೊಡನೆ ವಿವರಿಸುವ ಈ ಕವನದೊಳಗೆ ಹಸಿ ಹಸಿ ಮೊಟ್ಟೆ ಕುಡಿಯುವ ಶರೀರ, ಹೆಣ್ಣು ರೂಪಕಗಳು, ಕೊಬ್ಬಿದ ಕುರಿಯ ಕತ್ತರಿಸುವ ಕಟುಕನ ಉಪಮೆ ಕ್ರೌರ್ಯದ ಹಸಿ ಅನುಭವ ಕಣ್ಣಿಗೆ ಕಟ್ಟುವಂತೆ ಮಾಡಿದೆ.

ಇನ್ನೂ ಹುಟ್ಟಿದ ನಂತರ ಸ್ಥಿತಿ ಇನ್ನೊಂದು ಬಗೆಯದು:

**"ಅವಳು ಮಗುವಾಗಿ**
**ಹೆಣ್ಣಾಗಿ ಮಾಗಿ**
**ಮುದುಕಿಯಾಗಿ**
**ಮೊಗ್ಗಾಗದೆ**
**ಹೂವಾಗದೆ ಕಾಯಿ**
**ಹಣ್ಣಾಗದೆ ಮಣ್ಣಿಗೆ ತುಟಿ ಒತ್ತಿ ಮಲಗಿದಳು"**

ಹಣ್ಣಾಗದೆ ಮಾಗುವ ಅಕಾಲಿಕ ಪರಿವರ್ತನೆ ಕೂಡ ತನ್ನದೇ ರೀತಿಯಲ್ಲಿ ಬೆಳೆಯುವ ಸ್ವಾತಂತ್ರ್ಯ ಹೆಣ್ಣು ಮಕ್ಕಳಿಗೆ ಇರದಿರುವುದಕ್ಕೆ ಇದಕ್ಕೆ ಕಾಲ ದೇಶಗಳ ವ್ಯತ್ಯಾಸವಿಲ್ಲ ಎನ್ನುವುದನ್ನು ತಿಳಿಸುತ್ತಾರೆ ಕವಿತಾ ರೈ. ಹೆಣ್ಣಿನ ಮನಸ್ಥಿತಿ ಪರಿಸ್ಥಿತಿಗಳ ನೈಜ ವಿವರಣೆಯಿಂದ

ಕವಿತೆ ಕೂಡಿದೆ.

**“ನದಿಯಾಗಿ ಚಲನೆ**
**ಸಾಗರದ ಸ್ಥಿರವ ಕೂಡಿದ**
**ಗಳಿಗೆಗೊಮ್ಮೆ ಕೊಡುವ**
**ಯಾತನೆಯ ಹೊಸ ಹುಟ್ಟು**
**ನೀ ಅಲೆ ಅಪ್ಪಳಿಸಿ**
**ನನ್ನ ಇಲ್ಲವಾಗಿಸು ದಯವಿಟ್ಟು”**

ಸಾಮಾಜಿಕವಾಗಿ ಕುಟುಂಬ ನೆರೆಹೊರೆಗಳು ಹೆಣ್ಣನ್ನು ಹೀಗೆ ನಡೆಸಿಕೊಳ್ಳುವುದೇನು ಸರಿ? ಎಲ್ಲರಲ್ಲೂ ಅಜ್ಞಾನದ ತಕೊಂಡು ಯುವ ಶಿಕ್ಷಣ ವ್ಯವಸ್ಥೆ ಒಳಗೂ ಅಂದರೆ ಲಿಖಿತ ಲೋಕದಿಂದಲೇ ಇಂತಹ ತಾರತಮ್ಯವಿದೆ ಎನ್ನುವುದಕ್ಕೆ ನಿದರ್ಶನವಾಗಿದೆ.

ಮದುವೆ ತಾಯ್ತನದಲ್ಲೂ ಹೆಣ್ಣಿನ ಆಯ್ಕೆಗೆ ಪ್ರಾಶಸ್ತ್ಯವಿಲ್ಲದಿರುವುದನ್ನು ಕೂಡ ಮಹಿಳಾ ಕಾವ್ಯ ಕಂಡರಿಸುತ್ತದೆ.

**“ಬೆಳಕ ಹಿಡಿದು ಹೊರಟ**
**ಕತ್ತಲ ದಾರಿಯಲ್ಲಿ**
**ಅನಾಥ ಹೆಜ್ಜೆಯ ರಾಗ**
**ಮಂದ್ರಸ್ಥಾಯಿಯ ತಾರಕಕ್ಕೆ**
**ಅಬ್ಬರದ ಮರೆತ ಆ ಮೋಹ**
**ನಿಧಾನಗತಿಯಲ್ಲಿ ಹೆಪ್ಪಿಟ್ಟ**
**ಪರವಶತೆಗೆ ಹಾಕುವುದು**
**ಸುಳ್ಳಲ್ಲದ ಆತ್ಮದ ಬಿಸುಪು”**

ಇಲ್ಲಿ ಕಾಣದ ಶಕ್ತಿ ಇದೆ, ಮೊರೆ ಇಡುವ ಕವಿತೆ ಇದೆ. ಎಲ್ಲ ಜೀವಿಗಳಂತೆ ನೈಸರ್ಗಿಕ ಕ್ರಿಯೆ ಮಾತ್ರವಾಗಿ ಉಳಿಯದೆ ಮನುಷ್ಯರ ವಿಷಯದಲ್ಲಿ ಅದೊಂದು ಸಾಮಾಜಿಕ ಸಂಗತಿಯು ಆಗಿ ಅದರ ಉಸ್ತುವಾರಿಯನ್ನೆಲ್ಲ ಹೆಣ್ಣಿನ ತಲೆಗೆ ಕಟ್ಟಿರುವ ಕ್ರಮವನ್ನು ಪ್ರಶ್ನಿಸುತ್ತಾರೆ. ಯಾರು ವ್ಯವಸ್ಥೆಯ ಹೊಣೆಗಾರರು ಅವರಿಂದ ಉತ್ತರ ದೊರೆಯಲಾರದು ಎಂಬ ನಂಬಿಕೆಯಿಂದಲೂ ಏನು ಕವಯತ್ರಿ ಕಾಣದ ಶಕ್ತಿಯಲ್ಲಿ ಕೈಮುಗಿದು ಪ್ರಶ್ನೆ ಮಾಡುವ ಪರಂಪರಾಗತ ಕ್ರಮ ಅನುಸರಿಸುತ್ತಾರೆ.

ಎಲ್ಲ ಬಗೆಯ ಬಲಿದಾನಗಳು ಸ್ತ್ರೀಯೇ ಆಗಿರುವ ಚಿತ್ರಣ ಪೌರಾಣಿಕ, ಐತಿಹಾಸಿಕ, ಜಾನಪದ, ವರ್ತಮಾನ ಬದುಕಿನ ಹೆಣ್ಣು ಕೂಡ ಶೋಷಣೆಯಲ್ಲಿ ಬಲಿಯಾಗುತ್ತಾಳೆ.

**“ಇನ್ಯಾರು? ಆ ಕೂಸಿನ ಅಮ್ಮ ಮತ್ತು ಅಜ್ಜ**
**ನವಿಲುಗರಿಯ ಧ್ವನಿಯ ತುಂಬಾ ಆಕ್ರೋಶ**
**ಹೆರುವುದ್ಯಾಕೋ? ತ್ಯಜಿಸುವುದ್ಯಾಕೋ? ಆ ಕುಂತಿಯಂತೆ**
**ಕರಿಕಲ್ಲ ಕೋಡಿಗೆ ನೋವಿನ ಉಮ್ಮಳ**
**ಕುಂತಿ ಎಂದದ್ದೇ ನೆನಪಾಯ್ತು ನವಿಲುಗಿರಿಗೆ**
**ವರ್ಷದ ಹಿಂದೆ ನಿನ್ನೊಳಗಿಂದ ಕೇಳುತ್ತಿತ್ತು ಯಾರೋ ಬೊಬ್ಬರಿದ ಧ್ವನಿ**
**ಕುತೂಹಲ ಗರಿಗೆದರಿತ್ತು**
**ಈಗ ನೀಡು ಸುಯ್ಯುವ ಸರದಿ ಕರಿಕಲ್ಲು ಕೂಡಿಗೆ”**

ಇಲ್ಲಿ ಗರ್ಭಿಣಿ ಬಲಿ ನೀಡಿದೆ. ತ್ಯಾಗ ಬಲಿದಾನದ ಹೆಸರಿನಲ್ಲಿ ಮಹಿಳೆಯನ್ನು ಶೋಷಿಸಲಾಗಿದೆ. ಆದರ್ಶಗಳ ಹೆಸರಿನಲ್ಲಿ ಇಂತಹ ಜೀವ ವಿರೋಧಿ ಕೃತ್ಯಗಳನ್ನು ಖಂಡಿಸುತ್ತಾರೆ. ಹಾಗೆಯೇ ಶಾಸ್ತ್ರಗಳಲ್ಲಿ ಹೆಣ್ಣಿನ ಕಾರ್ಯ ವೈಖರಿಯ ಬಣ್ಣನೆಯೂ ಕುರಿತು

ಇಂತಹ ಪ್ರತಿಕ್ರಿಯೆ ಮೂಡಿಬಂದಿದೆ. ಹೆಣ್ಣಿಗೆ ಸಮಾಜ ಕೊಡಮಾಡುವ ಯಾವ ಸ್ಥಾನದಿಂದಲೂ ಪ್ರಗತಿ ಇಲ್ಲ. ಗರತಿ ಒಂದು ಆದರ್ಶ, ಇನ್ನೊಂದು ಅನೈತಿಕತೆ, ಒಂದಕ್ಕೆ ಪುರಸ್ಕಾರ ಇನ್ನೊಂದನ್ನೇ ತಿರಸ್ಕಾರ. ಹೋಗಲಿ ಇದರಿಂದ ಗಳಿಸಿದ್ದಾದರೂ ಏನು? ವ್ಯತ್ಯಾಸವಾಗಿದೆಯೇ ಎಂದು ಆಲೋಚಿಸಿದರೆ ಇಬ್ಬರ ಸ್ಥಿತಿಯಲ್ಲೇನೂ ಬದಲಾವಣೆ ಇಲ್ಲ. ಒಬ್ಬಾಕೆ ಸಂಸಾರದಲ್ಲಿ ಬಂದಿ, ಇನ್ನೊಬ್ಬಾಕೆ ಸಮಾಜದಿಂದ ಮೀರಿ ಬಂದವಳು. ಸೀತೆ ಅಗ್ನಿ ಪ್ರವೇಶ ಮಾಡಿ ತನ್ನ ಪಾತಿವ್ರತ್ಯ ಪ್ರದರ್ಶಿಸಿದರು, ರಾಮನ ಸಂಶಯಕ್ಕೆ ಕಾಡಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲಾಗಲಿಲ್ಲ. ಮೂರನೇ ವ್ಯಕ್ತಿಯ ಮಾತಿಗಾಗಿ ಹೆಂಡತಿಯ ವ್ಯಕ್ತಿತ್ವವನ್ನು ಎತ್ತಿ ಹಿಡಿಯಲಾಗದ ಗಂಡಿನ ದೌರ್ಬಲ್ಯ ಎಲ್ಲಾ ಕಾಲಕ್ಕೂ ಇಂತಹವು ಇವೆ. ಇದರಿಂದ ಈ ನಾಡಿಗೆ ನೆಮ್ಮದಿ ಇಲ್ಲ ಎಂಬುದು ನಿರೂಪಕಿಯ ಅನಿಸಿಕೆ. ಮಹಿಳೆಯರ ಮೇಲೆ ಒಟ್ಟಾರೆ ನಡೆಯುವ ದೌರ್ಜನ್ಯವನ್ನು ಹಂಗಿಸುತ್ತದೆ. ದೈಹಿಕ ಕಾರಣದಿಂದ ಹೆಣ್ಣು ಅನುಭವಿಸುವ ಮುಜುಗರವನ್ನು ಅಭಿವ್ಯಕ್ತಗೊಳಿಸಿದೆ.

**“ಅವಳು ತೆರಳಿದ ಮನೆ**
**ಬೀಗ ಏನು ಹಾಕಿದ್ದಲ್ಲ**
**ಇದ್ದಾರೆ ಮನೆಯಲ್ಲಿ ಮನುಷ್ಯರಂತೆ**
**ಕಾಣಿಸುವವರು. ಜೊತೆಗೆ**
**ಬೆಕ್ಕು ನಾಯಿ ದನ ಹಂದಿ**
**ಏನು ಇರಲಿಲ್ಲ”**

ಹೆಣ್ಣಿನ ದೇಹವೆಂದ ಕೂಡಲೇ ಜೊಲ್ಲು ಸುರಿಸುವ ಗಂಡಿನ ಪ್ರವೃತ್ತಿ ಮತ್ತು ಮೇಲ್ನೋಟದಲ್ಲಿ ಮಾತ್ರ ಸಾತ್ವಿಕರಂತೆ ತೋರಿಸಿಕೊಳ್ಳುವ ಆಷಾಢ ಭೂತಿತನವನ್ನು ಇಲ್ಲಿ ಹೇಳಲಾಗಿದೆ. ಹೆಣ್ಣನ್ನು ತಮ್ಮ ಅಧಿಕಾರ ಹಣದ ಬಲದಿಂದ ದುರ್ಬಳಕೆ ಮಾಡಿಕೊಳ್ಳುವವರನ್ನು ಒಳಗೊಂಡಂತೆ ಈ ಪ್ರಸಂಗವನ್ನು ವಿಸ್ತರಿಸಬಹುದಾಗಿದೆ. ಇನ್ನು ಹೆಣ್ಣಿನ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಭಾರತೀಯ ಪರಂಪರೆಯಲ್ಲಿ ಹೆಜ್ಜೆ ಹಾಕುತ್ತಿರುವವರಿಗಂತೂ ಇನ್ನಿಲ್ಲದ ಹಿಂಸೆ ನೀಡುವ ಸಂಗತಿಯಾಗಿದೆ.

**“ಗಂಡಿನ ಬಗೆಯ ಸಂಘ**
**ಸುಖವೇ ನೆತ್ತರಾಗಿ ಪ್ರಾಣವಾಗಿ**
**ಹೊಸ ಕಾಯಕ್ಕೆ ಗರ್ಭವಾಗಿ**
**ಇಹವ ಕಡೆದು ಪರವ ನಿಲ್ಲಿಸಿದಳಾ ತಾಯಿ”**

ಇಲ್ಲಿ ಗಂಡು ಮತ್ತು ಹೆಣ್ಣಿನ ರೂಪಕಗಳನ್ನು ತಿಳಿಸಿದ್ದಾರೆ. ಪುರುಷನಿಂದ ಆಗುವ ದೌರ್ಜನ್ಯವಾದರೆ ಇನ್ನು ಕೌಟುಂಬಿಕ ವಲಯದೊಳಗೆ ದೌರ್ಜನ್ಯವು ಅಡಗಿದೆ. ಗಂಡಿನ ಮಿಥ್ಯೆ ಬಯಸಿದ ಹೆಣ್ಣಿಗೆ ಕೊನೆಗೆ ಸಿಗುವುದು ಕಣ್ಣೀರು ಎಂಬುದನ್ನು ಅರ್ಥಪೂರ್ಣವಾಗಿ ಕವಯಿತ್ರಿ ತಿಳಿಸಿದ್ದಾರೆ. ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ ಹೆಣ್ಣು ಎದುರಿಸುವ ಎಲ್ಲ ವಿಧದ ದಮನಗಳನ್ನು ಕೂಡ ಮಹಿಳಾ ಕಾವ್ಯ ಎದುರುಗೊಳ್ಳುತ್ತದೆ. ಕೊನೆಗೊಂದು ಎಚ್ಚರಿಕೆಯ ಸಂದೇಶ ಕೂಡ ಇದೆ. ತಮ್ಮ ಕವನ ಒಂದರಲ್ಲಿ ಇಂತಹ ಎಚ್ಚರಿಕೆ ಸಂದೇಶವನ್ನು ನೀಡುತ್ತಾರೆ.

**“ಒಂದಲ್ಲ ಒಂದು ದಿನ**
**ಈ ನೆಲದ ತುಂಬಾ**
**ಹೆಣ್ಣುಗಳು ಮೆರವಣಿಗೆ ಹೊರಡುತ್ತಾರೆ**
**ದೇಹದಗುಂಟ ಹರಿದ**

**ನೆತ್ತರಿನ ಚರಿತೆ ತೊಳೆಯಲು**
**ಹೊಸ ನದಿಯ ಹುಡುಕಿ ನಡೆಯುತ್ತಾರೆ''**

ಇಂದು ಭೌತಿಕವಾಗಿ ಸಾಧ್ಯವಾಗುತ್ತಿರುವ ಅನೇಕ ನಿದರ್ಶನಗಳು ನಮ್ಮ ಕಣ್ಣ ಮುಂದೆ ಇವೆ. ಶಿಕ್ಷಣ ಉದ್ಯೋಗಗಳ ಮೂಲಕ ತಮ್ಮ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಂಡಿರುವ ಮಹಿಳೆಯರು ದೌರ್ಜನ್ಯ ಅಸಮಾನತೆಗಳ ವಿರುದ್ಧ ಧರಣಿ ನಡೆಸುತ್ತಾರೆ. ಮೇಲಾಗಿ ಇಂದು ಭೌತಿಕವಾಗಿಯೇ ಕಾಣಿಸಿಕೊಳ್ಳಬೇಕೆಂದೇನೂ ಇಲ್ಲ. ಹೊಸ ನದಿಯ ಹುಡುಕಾಟ ಮಾನಸಿಕವಾಗಿ ಆದರೂ ಅದರ ಜ್ಞಾನಲೋಕ ವಿಸ್ತಾರವಾಗುತ್ತದೆ. ತನ್ಮೂಲಕ ತಮ್ಮನ್ನು ತಾವು ಕಾಪಾಡಿಕೊಳ್ಳುವ ಧೈರ್ಯವಾದರೂ ಹೆಚ್ಚುತ್ತದೆ.

ಸುಮಾ ಸಾವಂತ ಅವರ 'ಅಲಗಿನ ಹೆಜ್ಜೆಗಳು' ಕವಿತೆಯಲ್ಲಿ ವ್ಯಕ್ತವಾದ ಸಾಲು:

**''ನಾನು ಹೆಣ್ಣು ಹೌದು**
**ಭೂತ ವರ್ತಮಾನ ಭವಿಷ್ಯದಲ್ಲಿಯೂ**
**ಕೂಡ ಏನಂತೆ ನನ್ನ ಹೆಜ್ಜೆಗಳ ಹಾದಿಗೆ**
**ನೀವು ಎಂದೂ ಹೂವಾಗಲಿಲ್ಲ**
**ಜಾಹಿರಾತಿನ ಗೊಂಬೆ ಮಾಡಿದಿರಿ**
**ಸರಕಿನ ಸುಂಕ ಮಾಡಿದಿರಿ**
**ಕಂಡಲ್ಲಿ ಕೋಮಲ**
**ಮನಸಿಗೆ ಘಾಸಿ ಮಾಡುವಿರಿ**
**ನನ್ನ ಹೆಜ್ಜೆ ಸದಾ ಅಲಗಿನ ಮೇಲೆ**
**ನಡೆಯುವಂತೆ ನೋಡಿಕೊಳ್ಳುವಿರಿ''**

ಈ ವರೆಗೂ ಹೊರಬಂದ ಕನ್ನಡದ ಪ್ರಮುಖ ಸ್ತ್ರೀವಾದಿ ಚಿಂತಕಿಯರ ಆಶಯಗಳಿಗೆ ಪೂರಕವಾದ ಸಾಲುಗಳಿವು. ನಾಳೆ ಎಂಬುದು ಹೊಸ ಬೆಳಕನ್ನು ತರಬಹುದೆಂಬ ಮಹದಾಸೆಯಿಂದಲೇ ಬದುಕು ಕಟ್ಟಿಕೊಳ್ಳುವ ಹಾಗೂ ಗಟ್ಟಿಗೊಳಿಸಿಕೊಳ್ಳುವ ಅಸಂಖ್ಯಾತ ಹೆಣ್ಣುಮಕ್ಕಳ ಪ್ರಗತಿಪರ ಧೋರಣೆಯಾಗಿ ಈ ಸಾಲುಗಳು ಹೊರಹೊಮ್ಮಿವೆ.

**''ಮಾಗಿಯ ಚಳಿಯಲ್ಲಿ**
**ನೆಲೆ ತಪ್ಪಿದ ಮೈಮನಗಳಿಗೆ**
**ಕಾವು ಕೊಡಲಿಲ್ಲ ಕವನ**
**ಹಸಿದವಳ ಹಾದರದ**
**ಹರಿದ ಚಾದರದಲ್ಲಿ ಬೆಚ್ಚಗಾದವನ**
**ಬಣ್ಣ ಬಯಲು ಗೊಳಿಸಲಿಲ್ಲ ಕವನ''**

'ಕವನ ಕೊಟ್ಟದ್ದು' ಎಂಬ ಕವಿತೆಯ ಮೂಲಕ ಕವಯತ್ರಿಯು ತಮ್ಮ ಸಾಹಿತ್ಯದ ಮೂಲಕ ಪ್ರತಿಭಟಿಸಿದರು ಯಾವುದೇ ಪ್ರಯೋಜನ ಆಗದಿರುವುದನ್ನು, ವ್ಯವಸ್ಥೆಯು ಬದಲಾಗದಿರುವುದನ್ನು ನೋಡಿ ಈ ರೀತಿಯಾಗಿ ಹೇಳುತ್ತಾರೆ. ಈ ಕವನ ಮುಂದುವರೆದು ದೇಶಭಕ್ತನ ಪೋಸು ಕೊಟ್ಟು ಹಗಲು ದರೋಡೆ ಮಾಡುವ ಬೆಳ್ಳಕ್ಕಿಗಳು ಎಂಬ ಈ ನುಡಿಯು ದೇಶಭಕ್ತರೆಂದೇ ಶೋಷಣೆ ಮಾಡುವವರನ್ನು ಖಂಡಿಸುತ್ತಾಳೆ. ಮಹಿಳೆಗೆ ನೀನು ಹೀಗೆ ಇರಬೇಕು ಎಂದು ಕಟಿಬದ್ಧಗೊಳಿಸಲು ಸಮಾಜ ಆಕೆಯ ಮೇಲೆ ಹೆಣ್ತನ ಹೇಡಿತನವನ್ನು ಹಾಕಿದೆ ಎಂದು ಕವಯಿತ್ರಿ ಹೇಳುತ್ತಾಳೆ.

**''ನಾ ಅರ್ಧಾಂಗಿಯಾಗಿದ್ದರೂ**
**ನನ್ನಲ್ಲಿರುವ ಯಾವ ಅಂಗ ನನ್ನದು**
**ಅವನ ನಗು ನನ್ನದೆನ್ನಬೇಕು**
**ನನ್ನ ಗೆಲುವು ಅವನದೆನ್ನಬೇಕು''**

‘ನನ್ನ ಹೃದಯ’ ಎಂಬ ಕವನದಲ್ಲಿ ಹೆಣ್ಣನ್ನು ಪುರುಷನ ಅರ್ಧಾಂಗಿಣಿ ಎಂದು ಹೇಳುತ್ತದೆ. ಆದರೆ ವಿಪರ್ಯಾಸವೆಂದರೆ ಹೀಗೆ ಸಮಾನ ಅವಕಾಶ ನೀಡದೆ ಇರುವುದು. ಇಂದಿನ ಆಧುನಿಕ ಯುಗದಲ್ಲಿ ಪತಿದೇವ ಎಂಬ ಮಾತು ಇದೇ ವಿನಃ ಪತ್ನಿದೇವಿ ಎಂಬ ಮಾತು ಕೇಳಿ ಬರುವುದಿಲ್ಲ. ಆಡಳಿತ ರೂಢವಾದ ಎಲ್ಲಾ ಹೆಸರುಗಳು ಪುರುಷಕೇಂದ್ರೀತ ಇರುವುದನ್ನು ಕಾಣುತ್ತೇವೆ. ಇಲ್ಲಿ ಹೆಣ್ಣು ಗಂಡು ಎಂಬ ತಾರತಮ್ಯವನ್ನು ಕಾಣುತ್ತೇವೆ. ಮಹಿಳೆಗೂ ಅವಳದೇ ಆದ ಭಾವನಾ ಲೋಕವೆಂಬುದೊಂದು ಇದೆ. ಆ ಭಾವನೆಯು ಇನ್ನೊಬ್ಬನ ಸ್ವತ್ತನ್ನಾಗಿ ಮಾಡುವ ಈ ಹೆಣ್ಣಿನ ದುರವಸ್ಥೆಯನ್ನು ಕವಯಿತ್ರಿ ಖಂಡಿಸುತ್ತಾಳೆ.

**“ಸತಿ ಹೋದ ಸಾವಿತ್ರಿಯರ ಭಸ್ಮ**
**ನನ್ನ ಮೊಸರ ಮೇಲೆ ಢಾಳಾಗಿ**
**ಕಾಣುವಾಗಲೆಲ್ಲ ನನ್ನ ರಕ್ತ ಹೆಪ್ಪುಗಟ್ಟುತ್ತದೆ”**

‘ಬದುಕು’ ಎಂಬ ಕಾವ್ಯದಲ್ಲಿ ಸಮಾಜದ ಅನಿಷ್ಟ ಪದ್ಧತಿಗಳಲ್ಲಿ ಒಂದಾದ ಸತಿ ಪದ್ಧತಿಯು ಹೆಣ್ಣನ್ನು ಪ್ರಾಚೀನ ಕಾಲದಿಂದಲೂ ಬಲಿ ತೆಗೆದುಕೊಳ್ಳುತ್ತಾ ಬಂದಿರುವಂತಹದ್ದು. ಗಂಡ ಸತ್ತ ಕೂಡಲೇ ಗಂಡನ ಚಿತೆಯಲ್ಲಿ ಜೀವಂತವಾಗಿ ಹೆಣ್ಣನ್ನು ಸುಡುವ ಕೆಟ್ಟ ಪದ್ಧತಿಯನ್ನು ಭಾರತೀಯ ವ್ಯವಸ್ಥೆಯಲ್ಲಿ ನೋಡಿದ್ದೇವೆ. ಒಂದು ಜೀವಿಯನ್ನು ಬಲಿ ತೆಗೆದುಕೊಳ್ಳುವ ಈ ಕ್ರೂರ ಪದ್ಧತಿಯನ್ನು ಕಾವ್ಯ ಪ್ರತಿಭಟಿಸುತ್ತದೆ.

ಕವಯತ್ರಿಯರ ಬಹುಪಾಲು ಕಾವ್ಯಗಳನ್ನು ಸ್ತ್ರೀವಾದ ನೆಲೆಯಲ್ಲಿ ರಚಿಸುತ್ತಾ ಸ್ತ್ರೀ–ಪುರುಷರ ಸಮಾನತೆಯನ್ನು ತರುವ ಹಂಬಲ ಎದ್ದು ಕಾಣುತ್ತದೆ. ಸಮಾಜ ಎಂದಾಗ ಅಲ್ಲಿ ಸ್ತ್ರೀ–ಪುರುಷರ ಸಂಬಂಧ ಆದರ್ಶವಾಗಿದ್ದಾಗ ಮಾತ್ರ ಆದರ್ಶ ಸಮಾಜ ಎಂದು ಗುರುತಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ಕವಯತ್ರಿಯರು ಸ್ತ್ರೀವಾದ ನೆಲೆಗಳ ಮೂಲಕ ಆದರ್ಶ ಸಮಾಜದ ನಿರ್ಮಾಣದ ತುಡಿತವನ್ನು ತಮ್ಮ ಕಾವ್ಯದ ಮುಖೇನ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ಒಟ್ಟಿನಲ್ಲಿ ಇಂದಿನ ಮಹಿಳೆ ಪ್ರಸ್ತುತ ಸಂದರ್ಭದಲ್ಲಿ ಆಧುನಿಕ, ವೈಜ್ಞಾನಿಕ, ತಂತ್ರಜ್ಞಾನ ಯುಗದಲ್ಲಿ ಕೇವಲ ಪುರುಷ ಸ್ಪರ್ಧಿಯಲ್ಲ. ಅದರ ಜೊತೆಗೆ ಇವುಗಳನ್ನೆಲ್ಲ ಎದುರಿಸಬೇಕಾಗಿದೆ. ಸಂಸಾರ, ವೃತ್ತಿ, ಸಮಾಜ ಬೇರೆ ಬೇರೆ ಸಂದರ್ಭಗಳಲ್ಲಿ ನಾನಾ ಸವಾಲುಗಳ ಜೊತೆ ಪಯಣಿಸಬೇಕಾಗಿದೆ. ಇತ್ತೀಚಿನ ಕವನಗಳಲ್ಲಿ ಪುರುಷದ್ವೇಷ ಕಂಡು ಬರದೆ, ಮಹಿಳಾ ಸಬಲೀಕರಣದ ಹೊಸ ಹೊಸ ತುಡಿತಗಳನ್ನು ಕಾಣುತ್ತೇವೆ. ಸಮಾಜದ, ದೇಶದ ಚಿಂತನೆಗಳನ್ನು ಬಿಂಬಿಸುವ ಮೂಲಕ ತಾನು ವ್ಯಕ್ತಿಯಾಗಿ, ಶಕ್ತಿಯಾಗಿ ಸಂವೇದಿಸಬಲ್ಲಳು ಎಂಬುದು ಸ್ಪಷ್ಟವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಮಾಧವಿ ಭಂಡಾರಿ, (2001), ಹರಿದ ಸ್ಕರ್ಟಿನ ಹುಡುಗಿ, ಅಂಕೋಲಾ: ಶ್ರೀ ರಾಘವೇಂದ್ರ ಪ್ರಕಾಶನ.
2. ವಿನಯಾ ಒಕ್ಕುಂದ, (2006), ನೂರುಗೋರಿಯ ದೀಪ, ಬಳ್ಳಾರಿ: ಲೋಹಿಯಾ ಪ್ರಕಾಶನ.
3. ಕವಿತಾ ರೈ, (2010), ನೀರತೇಜಿಯನೇರಿ, ಬೆಂಗಳೂರು: ಸೃಷ್ಟಿ ಪಬ್ಲಿಕೇಷನ್ಸ್.
4. ಸುಧಾ ಚಿದಾನಂದಗೌಡ, (2013), ಬಯಲ ಧ್ಯಾನ, ಬಳ್ಳಾರಿ: ಸುಯೋಧನ ಪ್ರಕಾಶನ.
5. ಶ್ರೀದೇವಿ ಕೆರೆಮನೆ, (2020), ಮೈ ಮುಚ್ಚಲೊಂದು ತುಂಡು ಬಟ್ಟೆ, ಹಾವೇರಿ: ಪಲ್ಲವ ಪ್ರಕಾಶನ.
6. ಸವಿತಾ ಬನ್ನಾಡಿ, (2017), ನೀರಿಗೆ, ಬೆಂಗಳೂರು: ಕವಿ ಪ್ರಕಾಶನ.
7. ಎಚ್. ಎಸ್. ಅನುಪಮಾ, (2015), ಸಹಗಮನ, ಅಂಕೋಲಾ: ಶ್ರೀ ರಾಘವೇಂದ್ರ ಪ್ರಕಾಶನ.
8. ಸುಮಾ ಸಾವಂತ, (2024), ಮಿಡಿದ ಮಾತು, ಕಲಬುರ್ಗಿ: ವಡ್ಡನಕೇರಿ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.